ಬಿದ್ದಿದ್ದವು. ಒಂದನ್ನೆತ್ತಿ 'ಕೋಟೆಬೇಣ' ಎಂದು ಬರೆದ. 'ಮುಂಬೈನಂಥ ಮುಂಬೈನಲ್ಲೂ ಪಾಳುಬಿದ್ದ ಕಥಾವಸ್ತುವನ್ನೇ ಆಯ್ದುಕೊಳ್ತಿಯಲ್ಲೋ ಮಾರಾಯ' ಎಂದು ಶಿಂಗನಮಕ್ಕಿ ಶಿವು ಹೀಯಾಳಿಸಿದಂತಾಗಿ ಕಾಟು ಹಾಕಿದ.

ಅವನೂ ಬರೆಯಬೇಕಾದ ಕತೆಯೂ ಸುಮ್ಮನೇ ಮುಖ ನೋಡುತ್ತಾ ಬಿದ್ದುಕೊಂಡವು.

ನಾಗರತಿಯೊಂದಿಗೆ ಸಂಭವಿಸಿದ ಮಾತು-ಕತೆಯ ಗುಂಗು ಮತ್ತೆ ಅವನನ್ನು ಆವರಿಸಿಕೊಂಡಿತು. ಆದರೆ ಕೊನೆಗೆ ಅವಳು ಹಾಗೆ ತನ್ನನ್ನು ಅಪರಿಚಿತನಂತೆ ಇಳಿಸಿ ನಡೆದದ್ದು ಹೊಸಬಣ್ಣನಿಗೆ ಸಣ್ಣ ಮುಳ್ಳಾಗಿ ಮೀಟಾಡಿಸಿತು. ನಾಗರತಿ ಹೇಳಿದ ಕೋಟೆಬೇಣದ ಸಂಗತಿಗಳು ಇನ್ನೂ ಕಾಡುತ್ತಿದ್ದರೂ, ಅವನ ಮನಸ್ಸು ಅದರಾಚೆಗೂ ಏನನ್ನೋ ಹುಡುಕಾಡುತ್ತಿತ್ತು. ಈಗ ಯೋಚನೆಗಳು ನಾಗರತಿಯಿಂದ ವಾಸುವಿನತ್ತ ಶಿಫ್ಟ್ ಆಗಿದ್ದವು. ಪರಿಚಿತ ನೆಲೆಯನ್ನು ದಾಟಿ ಅಪರಿಚಿತ ನೆಲೆಯತ್ತ ತುಡಿಯುವುದು ಕತೆಗಾರನ ಗುಣ ಎನಿಸಿತು.

ಹೀಗೆ ದಕ್ಕಿದ ಹೊಸ ಹೊಳವಿನಿಂದಲೋ, ವ್ಹಿಸ್ಕಿಯ ಪ್ರಭಾವದಿಂದಲೋ ಮನಸ್ಸು ತುಸು ಹಗುರಾಗಿ ನಾಗರತಿ ಮೀಟ್ ಮಾಡಿದ ಬಗ್ಗೆ ಗ್ರುಪ್ಪಲ್ಲಿ ಪೋಸ್ಟ್ ಮಾಡಬೇಕೆಂದು ಮೊಬೈಲ್ ಎತ್ತಿಕೊಂಡ. ಆದರೆ ವಾಟ್ಸಾಪ್‌ನಲ್ಲಿ ಟೈಪ್ ಮಾಡಿದ್ದೇ ಬೇರೆ! 'ನಮ್ಮ ಸೀನಿಯರ್ ಆಗಿದ್ದ, ಬುಲ್ಲೆಟ್ ವಾಸು ಎಲ್ಲಿದ್ದಾನೆ ಗೊತ್ತಾ?' ಎಂದು ಬರೆದು ಸೆಂಡ್ ಮಾಡಿದ. ಅದಕ್ಕೆ ನಾನಾ ನಮೂನೆಯ ಕಾಮೆಂಟುಗಳು ಬಂದು ಬೀಳುತ್ತಲೇ ಇದ್ದವು!

'ಕಾಡು ಕಡಿದು ಗಂಗಾವಳಿಯಲ್ಲಿ ಮರ ಸಾಗಿಸುತ್ತಿದ್ದ ಗ್ಯಾಂಗಿನಲ್ಲಿದ್ದನಲ್ಲ, ಅವನಾ?' 'ನಮ್ಮ ಕಾಲದ ವೀರಪ್ಪನ್ ಅವ್ನು' 'ಮುಂಬೈನಲ್ಲೇ ಇರಬಹುದು. ತಲೆಮರೆಸಿಕೊಳ್ಳುವವರ ತಾಣ ಅದು' 'ಗ್ರೇಟ್ ಕಬಡ್ಡಿ ಪ್ಲೇಯರ್...ಗೋವಾ ಫೆನ್ನಿಗೆ ಬರ್ಬಾದ್ ಆದ' ಹೀಗೆಲ್ಲ ತಲೆಗೊಂದು ಮಾತು ಬರುತ್ತಿತ್ತು. ಬಿಣಗಾ ಸೋಡಾ ಫೆಕ್ಟರಿಯಲ್ಲಿ ಕೆಮಿಸ್ಟ್ ಆಗಿರುವ ನಾರ್ವೇಕರ್, 'ನಿಮ್ಗೆ ನಾಪತ್ತೆಯಾದವ್ರದೇ ಚಿಂತೆ. ಇಲ್ಲಿ ಒಂಟಿ ಸಾಗುವಾನಿ ಮರವನ್ನು ಕೊಂದಾಕೋ ಹಾಗೆ ಕಾಣ್ತಿದೆ. ಕಾಂಟ್ರಾಕ್ಟರ್ ಬಸ್‌ಸ್ಟ್ಯಾಂಡ್ ನೆಲಕ್ಕೆ ಸಿಮೆಂಟ್ ಹಾಸುತ್ತಿದ್ದಾನೆ. ಬುಡಕ್ಕೂ ಆ ನಮೂನಿ ಕಾಂಕ್ರೀಟ್ ಬಿದ್ರೆ ಮರ ತಾನಾಗೇ ಸಾಯೋದು ಗ್ಯಾರಂಟಿ' ಎಂಬ ಮೆಸೇಜು ಹಾಕಿದ.

ಎಲ್ಲರೂ ಛೋ, ಶ್ಶೆ, ಅಯ್ಯೋ ಎನ್ನುತ್ತಾ ಸಾಗುವಾನಿ ಮರದಡಿಯ ನೆನಪುಗಳನ್ನು ಪೋಸ್ಟ್ ಮಾಡತೊಡಗಿದರು.

'ನಮ್ಮ ಹದಿಹರೆಯದ ಕನಸುಗಳು ಪಲ್ಲವಿಸುತ್ತಿದ್ದದ್ದು ಆ ಮರದಡಿಯಲ್ಲೇ' ಎಂದ ಒಬ್ಬ. 'ನಾನು ಹುಡುಗಿಗೆ ನೋಟ್ಸ್ ಎಕ್ಸ್‌ಚೇಂಜ್ ನೆಪದಲ್ಲಿ ಪ್ರೇಮಪತ್ರ ಕೊಟ್ಟದ್ದು ಅಲ್ಲೇ' ಎಂದ ಇನ್ನೊಬ್ಬ. 'ಡಿಗ್ರಿ ಮುಗ್ಸಿ ಕೆಲ್ಸ ಸಿಗೂವರೆಗೂ ನಮಗೆ ಈ ಮರವೇ ಅನೆಂಪ್ಲಾಯ್ಮೆಂಟ್ ಎಕ್ಸ್‌ಚೇಂಜು ಆಗಿತ್ತು ಮಾರಾಯಾ' ಎಂದ ಮತ್ತೊಬ್ಬ. 'ನನ್ನ ಮದುವೆ ಟೈಮಲ್ಲಿ ಹೆಣ್ಣು ನೋಡುವ ಶಾಸ್ತ್ರ ಆದದ್ದು ಆ ಮರದ ಕೆಳಗೇ' ಎಂದು ಸ್ಮೈಲಿಗಳನ್ನೂ, ನರ್ತಿಸುವ ಇಮೋಜಿಗಳನ್ನೂ ಅಂಟಿಸಿದಳು ಇನ್ನೊಬ್ಬಳು. 'ಭೂತಕಾಲದ ಒಣ ಮಾತುಗಳಲ್ಲಿ ಜಡ್ಡುಗಟ್ಟಿ ಹೋಗಿದ್ದೀರಿ. ಒಂದು ಹಸಿ ಮರವನ್ನು ಹೀಗೆ ಹುನಾರದಲ್ಲಿ ಕೊಲ್ಲುವ ಕ್ರೌರ್ಯ ನಿಮ್ಮನ್ನು ಕಾಡುವುದಿಲ್ಲ. ಹೊಸ ಸಸಿಗಳನ್ನು ನೆಡುವ ಇಚ್ಛಾಶಕ್ತಿಯೂ ನಿಮ್ಮ ಚೈತನ್ಯಕ್ಕಿಲ್ಲ. ನಿಷ್ಕ್ರಿಯರನ್ನಾಗಿಸುವ ಈ ವಾಟ್ಸಾಪ್ ಯುನಿವರ್ಸಿಟಿಗೆ ಮುಚ್ಚಾಕಿ' ಎಂದು ಚಂದ್ರಹಾಸ ಗ್ರುಪ್ಪಿಂದ ಎಕ್ಸಿಟ್ ಆದ. ಇದೇ ಗಳಿಗೆಯನ್ನು ಕಾದವರಂತೆ ಇನ್ನಿಬ್ಬರು ಬಿಟ್ಟು ಹೋದರು. ಚ್ಯಾಟಿಂಗು ನಿಂತಿತು. ಗ್ರೂಪ್ ಮೌನಕ್ಕೆ ಜಾರಿತು. ಹೊಸಬಣ್ಣನೇ ಮೌನ ಮುರಿದ.

'ಶ್ಶೆ ಶ್ಶೆ, ಸಾಗುವಾನಿ ಮರ ಉಳಿಸಿಕೊಳ್ಳಬೇಕು. ಅದು ನಮ್ಮ ಯೌವನದ ಅಸ್ಮಿತೆ! ನಾವೆಲ್ಲ ಸೇರುವಾ. ನಾನು ನಾಳೇನೇ ಹೊರಡ್ತೇನೆ...ಹಳೆ ಬೇರು ಉಳಿಸುವಾ, ಹೊಸ ಚಿಗುರೂ ಬೆಳೆಸುವಾ. ಅಪ್ಪಿಕೋ ಚಳುವಳಿ ಶುರು ಮಾಡೋಣ' ಎಂದ.

'ಚಾರ್ ಫೂಟಿನ ಹೊಸಬಣ್ಣ ಅಪ್ಪಿಕೊಂಡ್ರೆ, ಬೇರಿಗೂ ಒಂದು ಸುತ್ತು ಬರೂದಿಲ್ಲ' ಎಂದು ಶೇಷಗಿರಿ ನಕ್ಕು ನಕ್ಕು ಕಣ್ಣಲ್ಲಿ ನೀರು ಹರಿವ ಇಮೋಜಿಗಳನ್ನು ಹಾಕಿದ.

'ನಾಗರತಿಯೂ ನಮ್ಜೊತೆಗಿರ್ತಾಳೆ' ಎಂದು ಹೊಸಬಣ್ಣ ಬ್ರಹ್ಮಾಸ್ತ್ರ ಬಿಟ್ಟ. ಗ್ರುಪ್ಪು ಹೋಳಿ ಹಬ್ಬದಲ್ಲಿ ಕಾಮನ ಸುಟ್ಟಂತೆ ಧಗಧಗ ಹೊತ್ತಿಕೊಂಡಿತು!

●